## 7. ಪಂಡಿತ್ ನೆಹರೂ ಸಮಯಪ್ರಜ್ಞೆ

ಮಹಿಪತಿಯವರ ಮನೆ ನನ್ನ ಕಾಲೇಜಿಗೆ ಬಹಳ ಹತ್ತಿರವಾಗಿತ್ತು. ಆಗ ರಾಜಾಜಿನಗರ ತುಂಬ ಶಾಂತವಾದ ಪ್ರದೇಶ. ಆ ಪ್ರದೇಶವನ್ನು ಈಗ ನೋಡುವವರಿಗೆ ನಾನು ಹೇಳುವುದನ್ನು ನಂಬುವುದು ಕಷ್ಟ. ರಾಜಾಜಿನಗರ ಒಂದನೇ ಬ್ಲಾಕ್‌ನಲ್ಲಿ ಕಾಫಿ ಕುಡಿಯಬೇಕೆಂದರೆ ಒಂದು ಹೋಟೆಲ್ಲೂ ಇರಲಿಲ್ಲ. ನಮ್ಮ ಕಾಲೇಜು ಒಂದನೇ ಬ್ಲಾಕ್‌ನ ಮಧ್ಯಬಿಂದು–ನಾಲ್ಕುರಸ್ತೆಗಳು ಸೇರುವ ಸ್ಥಳ. ಸಾಯಂಕಾಲ ಆರು ಗಂಟೆಯ ನಂತರ ರಸ್ತೆಯಲ್ಲಿ ಯಾರೂ ಕಾಣುತ್ತಿರಲಿಲ್ಲ. ನನ್ನಂತಹ ಬ್ರಹ್ಮಚಾರಿಗಳಿಗೆ ಊಟ ದೊರಕಬೇಕೆಂದರೆ ಮೂರನೇ ಬ್ಲಾಕ್‌ನ ರಾಮಮಂದಿರದ ಹಿಂಭಾಗದಲ್ಲಿದ್ದ 'ತ್ರಿವೇಣಿ' ಹೋಟೆಲ್ಲಿಗೆ ಹೋಗಬೇಕಿತ್ತು. ರಾಜಾಜಿನಗರಕ್ಕೆ ಸಂಜೆ ಐದೂವರೆಯ ನಂತರ ಯಾವ ಆಟೋರಿಕ್ಷಾ ಕೂಡ ಬರುತ್ತಿರಲಿಲ್ಲ. ವಿಧಾನಸೌಧದಿಂದ ಕೆಲಸ ಮುಗಿಸಿ ಬರುವವರಿಗಾಗಿ ಸಾಯಂಕಾಲ ಆರು ಗಂಟೆಗೆ ಬಸ್ ಬರುತ್ತಿದ್ದವು. ಆ ನಂತರ ಯಾವ ಬಸ್ಸೂ ಇರಲಿಲ್ಲ. ರಾತ್ರಿ ಹನ್ನೆರಡಕ್ಕೊಂದು ಬಸ್ ಬರುವುದು, ಅದೂ ನವರಂಗ ಥಿಯೇಟರ್ ತನಕ ಮಾತ್ರ. ಆಗ ಅದನ್ನು ಕುಡುಕರ ಬಸ್ ಎನ್ನುತ್ತಿದ್ದರು. ಕೆಲಸಗಳನ್ನು ಮುಗಿಸಿ, ಪಾನಕ ಪಣ್ಯಾರಗಳನ್ನು ಪೂರೈಸಿಕೊಂಡು ಬರುವವರಿಗೆ ಅದೊಂದು ವಿಶೇಷ ಸವಲತ್ತು.

ನಾನು ಮಹಿಪತಿಯವರ ಮನೆಯಲ್ಲಿ ಸುಮಾರು ಎರಡು ಮೂರು ತಿಂಗಳು ಕಾಲ ಇದ್ದೆ. ಅವರ ಪರಿವಾರದ ಒಂದು ಅವಿಭಾಜ್ಯ ಅಂಗವೇ ಆಗಿದ್ದೆ. ಮಹಿಪತಿಯವರ ಹೆಂಡತಿ ನನಗೆ 'ವೈನಿ'ಯಾದರು. ಅವರ ಇಬ್ಬರು ಮಕ್ಕಳು ಆರತಿ ಮತ್ತು ಜಯಣ್ಣ ನನ್ನ ಅಂತಃಕರಣದ ಅಂಶವೇ ಆದರು. ಆರತಿ ಆಗ ಏಳೆಂಟು ತಿಂಗಳುಗಳ ಪುಟ್ಟ ಮಗು. ನಾನು ಆಕೆಯನ್ನು ಎತ್ತಿಕೊಂಡು ಕಾಲೇಜಿನ ಕಾರ್ಯಕ್ರಮಗಳಿಗೆ ಹೋಗಿಬಿಡುತ್ತಿದ್ದೆ. ಅಲ್ಲಿ ನನ್ನ ವಿದ್ಯಾರ್ಥಿನಿಯರು ಆಕೆಯನ್ನು ಮುತ್ತಿಕೊಂಡು ಸುತ್ತಾಡಿಸಿ, ಆಡಿಸುತ್ತಿದ್ದರು.

ರಾಜಾಜಿನಗರದ ಮುಖ್ಯರಸ್ತೆಯೇ 'ವಿದ್ಯಾಕೇಂದ್ರ' ಎಂಬ ಪುಟ್ಟ ಸಂಸ್ಥೆ ಇತ್ತು– ಬಹುಶಃ ಅದೊಂದು ಟೈಪ್ ರೈಟಿಂಗ್ ಶಾಲೆಯಾಗಿತ್ತು ಎಂಬ ನೆನಪು. ಅದು ಕಾಮತ ಎನ್ನುವವರಿಗೆ ಸೇರಿದ್ದು, ಅದರ ಮೇಲುಗಡೆ ಸುಮಾರು ಆರೇಳು ಕೊಠಡಿಗಳಿದ್ದವು. ಅದರಲ್ಲಿ ಮೊದಲನೆ ಕೊಠಡಿ ಖಾಲಿ ಇದೆ ಎಂಬ ಸುದ್ದಿ ಬಂದೊಡನೆ ಅಲ್ಲಿಗೆ ಹೋಗಿ ಯಜಮಾನರನ್ನು ಕಂಡೆ. ಅವರು ನನ್ನ ಸಂಪೂರ್ಣ ಜೀವನಚರಿತ್ರೆಯನ್ನು ಕೇಳಿ, ನಾನೊಬ್ಬ ಕಾಲೇಜಿನ ಮೇಷ್ಟ್ರು ಎಂದು ತಿಳಿದು ಕೊಠಡಿಯನ್ನು ಕೊಡಲು ಒಪ್ಪಿದರು. ಅವರು, "ಸ್ವಾಮಿ ನಿಮಗೆ ಕೋಣೆಯನ್ನೇನೋ ಕೊಡುತ್ತೇನೆ. ಆದರೆ, ಅದು ತುಂಬಾ ಚಿಕ್ಕದಾದದ್ದು. ನಾನು ಅದನ್ನು ಉಳಿದ ಕೋಣೆಗಳ ಸಾಮಾನುಗಳಿಗೆ ಸ್ಟೋರ್ ರೂಂ ಎಂದು ಮಾಡಿದ್ದೇನೆ. ನಿಮಗೆ ಸರಿಯಾಗುತ್ತದೋ ನೋಡಿ ಅಥವಾ ಈಗ ಸೇರಿಕೊಳ್ಳಿ, ಮುಂದೆ ಪಕ್ಕದ ಯಾವುದಾದರೂ ಕೋಣೆ ಖಾಲಿಯಾದರೆ ಅಲ್ಲಿಗೆ ಬದಲಾಯಿಸಿಕೊಳ್ಳಬಹುದು" ಎಂದು ತಮ್ಮ ಮಗನ ಕೈಯಲ್ಲಿ ಕೀಲಿ ಕೈ ಕೊಟ್ಟು ಕಳುಹಿಸಿದರು. ನಾನು ನನ್ನ ಮನಸ್ಸನ್ನು ಪುಟ್ಟ ಕೋಣೆಗೆ ಹೊಂದಿಸಿಕೊಳ್ಳುತ್ತಲೇ ಅಲ್ಲಿಗೆ ಹೋದೆ. ಅವರ ಹುಡುಗ ಬಾಗಿಲು ಕೀಲಿ ತೆಗೆದು ತಳ್ಳಿದ. ಐ ! ಅಲ್ಲೇನಿದೆ? ಎದುರುಗೋಡೆಯೇ ಇದೆ. ಒಳಗೆ ಕಾಲಿಟ್ಟರೆ ಎದುರುಗೋಡೆಯೆ! ಕೋಣೆಯ ಅಳತೆಯೇ ಐದೂವರೆ ಅಡಿ ಆರು ಅಡಿ. ಒಂದು ಮಂಚ ಹಾಕಿದರೆ, ಕೋಣೆಯಲ್ಲಿ ಕಾಲಿಟ್ಟ ತಕ್ಷಣ ಮಂಚದ ಮೇಲೆಯೇ ಕೂಡ್ರಬೇಕು. ಉಳಿದೆಲ್ಲ ರೀತಿಯಲ್ಲಿ ಅನುಕೂಲವಾದ್ದರಿಂದ ಒಪ್ಪಿಕೊಂಡೆ. ಅಂದೇ ಸಾಯಂಕಾಲ ನನ್ನ ಬಟ್ಟೆಬರೆಗಳನ್ನು ತೆಗೆದುಕೊಂಡು ಕೋಣೆಗೆ ಬಂದೆ. ನನ್ನ ಜೊತೆಗೆ ಮಹಿಪತಿಯವರೂ ಬಂದರು. ಕುತೂಹಲದಿಂದ ಕೋಣೆಯನ್ನು ನೋಡಿ "ಗುರುರಾಜಾ, ಒಂದು ಕೆಲಸ ಮಾಡು. ನಿನ್ನ ಪುಸ್ತಕ, ಅರಿವೆ ಎಲ್ಲಾ ಖೋಲಿಯೊಳಗಿಟ್ಟು, ಕೀಲೀ ಹಾಕಿ, ಹೊರಗೆ ಮಲಕೋ" ಎಂದು ತಮಾಷೆ ಮಾಡಿದರು. ಆ ಕೋಣೆಯಲ್ಲಿ ಹಾಕಲು ಒಂದು ಮಂಚವನ್ನು ಮಾಡಿಸುವುದು ಫಜೀತಿಯಾಯಿತು. ಯಾಕೆಂದರೆ ಅದನ್ನು ಕೋಣೆಯ ಗಾತ್ರಕ್ಕೆ ಮಾಡಿಸಬೇಕಲ್ಲ! ನಾನು ಕುಳ್ಳಗಾಗಿದ್ದುದರಿಂದ ಆ ಮಂಚ ನನಗೆ ಸರಿಯಾಯಿತು. ಆ ಕೋಣೆಯಿಂದ ನನ್ನ ಕಾಲೇಜು ಐದು ನಿಮಿಷದ ನಡಿಗೆಯ ದಾರಿ. ಆ ಕೋಣೆಯಲ್ಲಿಯೇ ಸುಮಾರು ಒಂದು ವರ್ಷ ನಾನಿದ್ದೆ.

ಕಾಲೇಜಿನ ತರಗತಿಗಳು ಪ್ರಾರಂಭವಾದವು. ಅದೇ ವರ್ಷ ಪ್ರಾರಂಭವಾದ ಕಾಲೇಜು ಅದು. ಅಲ್ಲಿ ಲೈಬ್ರರಿ, ಪ್ರಯೋಗಶಾಲೆ ಎಲ್ಲವೂ ಆಗಬೇಕಿತ್ತು. ನಮ್ಮ ಸಂಸ್ಥೆಗೆ ಉಪಾಧ್ಯಕ್ಷರಾಗಿದ್ದವರು ಶ್ರೀ ಪಾರ್ಥಸಾರಥಿಯವರು. ಕಾಲೇಜಿಗೆ ಮೂಲಸೌಕರ್ಯಗಳನ್ನು ಒದಗಿಸುವುದು ಅವರ ಜವಾಬ್ದಾರಿಯಾಗಿತ್ತು. ಅವರದು ಅಜಾನುಬಾಹು ಶರೀರ. ಅದಕ್ಕೆ ಸರಿಯಾದ ಉಚ್ಚಸ್ವರದ, ಆಳವಾದ ಧ್ವನಿ. ಅವರು ಭಾರತದ ಮೊಟ್ಟಮೊದಲ ಬೃಹತ್ ಆಣೆಕಟ್ಟೆಗೆ ಮುಖ್ಯ ಇಂಜಿನಿಯರ್ ಆಗಿ ಕೆಲಸ ಮಾಡಿದವರು. ಭಾರತದ

ಪ್ರಧಾನಮಂತ್ರಿಗಳಾಗಿದ್ದ ಪಂಡಿತ ಜವಾಹರಲಾಲ್ ನೆಹರೂರವರು ಸ್ವತಃ ಆಯ್ಕೆ ಮಾಡಿದ ವ್ಯಕ್ತಿ ಅವರು. ಅವರು ಸುಭಾಸ್ ಚಂದ್ರಬೋಸ್‌ರ "ಆಝಾದ್ ಹಿಂದ್ ಫೌಜ್" ದಲ್ಲಿ ನೇತಾರರಾಗಿ, ಅವರೊಂದಿಗೆ ಕೆಲಸ ಮಾಡಿದವರು. ದೇಶವಿದೇಶಗಳಲ್ಲಿ ಸಂಚರಿಸಿ ಬ್ರಿಟಿಷ್ ಸರಕಾರಕ್ಕೆ ಸಿಂಹಸ್ವಪ್ನರಾಗಿದ್ದವರು. ಅವರ ಹೆಸರನ್ನು ರೇಡಿಯೋದಲ್ಲಿ ಪ್ರಸಾರ ಮಾಡುತ್ತಿದ್ದರಂತೆ. "ಯಾರಾದರೂ ಈ ಸಾರಥಿಯವರನ್ನು ಜೀವಂತವಾಗಿ ಹಿಡಿದುಕೊಟ್ಟರೆ ಅಥವಾ ಕೊಂದು ದೇಹವನ್ನು ತೋರಿಸಿದರೆ ದೊಡ್ಡ ಬಹುಮಾನ" ಎಂಬುದು ಪ್ರಸಾರ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಮೇಲೆ ಅತಿ ದೊಡ್ಡ ಆಣೆಕಟ್ಟು ನಿರ್ಮಾಣವಾದದ್ದು 'ದಾಮೋದರ ವ್ಯಾಲಿ ಕಾರ್ಪೋರೇಶನ್" ಅಡಿಯಲ್ಲಿ, ಅಂದಿನ ಬಿಹಾರದಲ್ಲಿ ಪಾರ್ಥಸಾರಥಿಯವರನ್ನು ಅದಕ್ಕೆ ಮುಖ್ಯ ಇಂಜೀನಿಯರ್‌ರಾಗಿ ತೆಗೆದುಕೊಳ್ಳಲು ಸ್ವತಃ ನೆಹರೂರವರೇ ಪತ್ರ ಬರೆದಿದ್ದರು. ಅದನ್ನು ನನಗೆ ಪಾರ್ಥಸಾರಥಿಯವರು ತೋರಿಸಿದ್ದರು. ಪಾರ್ಥಸಾರಥಿ ಒಂದು ಜ್ಞಾನದ, ಅನುಭವದ ಅಕ್ಷಯ ಪಾತ್ರೆ. ಅವರು ತಮ್ಮ ಅನುಭವಗಳನ್ನು ಹೇಳುತ್ತಿದ್ದರೆ ನಮಗೆ ಮೈಮರೆತು ಹೋಗುತ್ತಿತ್ತು. ಒಂದು ಘಟನೆಯಂತೂ ಸುಂದರ ಮಾತ್ರವಲ್ಲ, ಐತಿಹಾಸಿಕವಾದದ್ದು.

ಆಣೆಕಟ್ಟು ಪೂರ್ತಿಯಾಗಿತ್ತು. ಇದರ ಉದ್ಘಾಟನೆಯನ್ನು ಯಾರು ಮಾಡುವುದು? ಬೃಹತ್ ಯೋಜನೆಗಳ ಕನಸು ಕಂಡಿದ್ದ ಪ್ರಧಾನಮಂತ್ರಿಯವರೇ ಅದನ್ನು ರಾಷ್ಟ್ರಕ್ಕೆ ಅರ್ಪಣೆ ಮಾಡುವುದು ಉಚಿತ ಎನ್ನಿಸಿತು ಪಾರ್ಥಸಾರಥಿಯವರಿಗೆ. ತಾವೇ ಪತ್ರ ಬರೆದರು. "**ಪಂಡಿತಜೀ,** ತಮ್ಮ ಕನಸಿನ ಯೋಜನೆ ಸಾಕಾರವಾಗಿದೆ. ಇದನ್ನು ತಾವೇ ಉದ್ಘಾಟಿಸಬೇಕೆಂಬುದು ನಮ್ಮೆಲ್ಲರ ಆಶಯವಾಗಿದೆ. ಇಂಥ ದಿನ, ಈ ಸಮಯಕ್ಕೆ ತಮಗೂ ವ್ಯವಧಾನವಿದೆಯೆಂಬುದನ್ನು ಮತ್ತು ತಾವು ಒಪ್ಪಿದ್ದೀರೆಂದು ಕೇಳಿ ತಿಳಿದುಕೊಂಡಿದ್ದೇನೆ. ತಾವು ದಯವಿಟ್ಟು ಆಗಮಿಸಿ ಕಾರ್ಯವನ್ನು ನಡೆಸಿಕೊಡಬೇಕು."

ಇಂತು ತಮ್ಮ ವಿಶ್ವಾಸಿ

–ಪಾರ್ಥಸಾರಥಿ

ಇಲ್ಲಿಯವರೆಗೆ ಪತ್ರ ಸರಿಯಾಗಿತ್ತು. ಆದರೆ ಮುಂದೆ ಅವರೊಂದು ವಿಶೇಷ ಸೂಚನೆಯನ್ನು ಬರೆದಿದ್ದರು. ಅದೊಂದು ಅತ್ಯಂತ ಧೈರ್ಯದ ಅಥವಾ ಉದ್ಧಟತನದ ಪ್ರದರ್ಶನ. ವಿ.ಸೂ. ಪಂಡಿತಜೀ, ನೀವು ಸಾಮಾನ್ಯವಾಗಿ ಯಾವ ಕಾರ್ಯಕ್ರಮಕ್ಕೂ ಸರಿಯಾಗಿ ಬರುವುದಿಲ್ಲ. ಈ ಉದ್ಘಾಟನೆಯನ್ನು ಆ ಕ್ಷಣಕ್ಕೆ ಮಾಡಬೇಕೆಂಬ ತೀರ್ಮಾನವಾಗಿದೆ. ತಾವು ದಯವಿಟ್ಟು ಅರ್ಧಗಂಟೆ ಮುಂಚಿತವಾಗಿ ಬನ್ನಿ. ತಮ್ಮಿಂದ ಬರುವುದು ತಡವಾದರೆ ಮತ್ತೊಬ್ಬರಿಂದ ಉದ್ಘಾಟನೆ ಮಾಡಿಸುವ ಅನಿವಾರ್ಯತೆ ಉಂಟಾಗುತ್ತದೆ.

ಇಂಥದ್ದನ್ನು ಯಾರಾದರೂ ಬರೆದಿದ್ದಾರೆಯೇ? ಅದೂ ಪ್ರಧಾನಮಂತ್ರಿಗಳಿಗೆ! ಅದೂ ಆ ಕಾಲದಲ್ಲಿ ನೆಹರೂ ಎಂದರೆ ನಿಲುಕಲಾರದ ನಕ್ಷತ್ರ, ಸರ್ವಶಕ್ತಿಯ ಕೇಂದ್ರ. ಆದರೆ ಆಶ್ಚರ್ಯವೆಂದರೆ ನೆಹರೂರವರ ಪ್ರತಿಕ್ರಿಯೆ ಇನ್ನೂ ಚೆನ್ನಾಗಿತ್ತು.

**ಆತ್ಮೀಯ ಸಾರಥಿ,**

ನನಗೆ ನಿಮ್ಮ ಸಮಯಪ್ರಜ್ಞೆಯ ಶ್ವಪಚತನದ ಪರಿಚಯವಿದೆ. ನಾನು ಅರ್ಧಗಂಟೆ ಮೊದಲೇ ಬರುತ್ತೇನೆ.– **ನೆಹರೂ**

ಉದ್ಘಾಟನೆಯ ದಿನ ಬಂದಿತು. ಹೇಳಿದಂತೆ ನೆಹರೂ ಅರ್ಧಗಂಟೆ ಮೊದಲೇ ಬಂದರು. ಸರಿಯಾದ ಸಮಯಕ್ಕೆ ಎಲ್ಲರೂ ಉದ್ಘಾಟನೆಯ ಶಿಲಾಫಲಕದ ಹತ್ತಿರ ಹೋದರು. ಇನ್ನೇನು ಪ್ರಧಾನಮಂತ್ರಿಗಳು ತೆರೆ ಸರಿಸಿ ಉದ್ಘಾಟನೆ ಮಾಡಬೇಕು. ಅವರು ಥಟ್ಟನೆ ನಿಂತು ಪಾರ್ಥಸಾರಥಿಯವರಿಗೆ ಕೇಳಿದರು, "ಸಾರಥಿ ನಾನು ಸರಿಯಾದ ಸಮಯಕ್ಕೆ ಬರದಿದ್ದರೆ ಮತ್ತೊಬ್ಬರಿಂದ ಉದ್ಘಾಟನೆ ಮಾಡಿಸುತ್ತೇನೆ ಎಂದು ಹೆದರಿಸಿದ್ದಿರಲ್ಲ, ಯಾರು ಆ ವ್ಯಕ್ತಿ?" ಪಾರ್ಥಸಾರಥಿ "ಅದೇನು ಬಿಡಿ ಸರ್, ತಾವು ಬಂದಿದಿರಲ್ಲ" ಎಂದರು. ನೆಹರೂ ಒಪ್ಪದೆ, "ಯಾರು ಆ ವ್ಯಕ್ತಿ ನಾನು ತಿಳಿಯಬೇಕು" ಎಂದು ಹಟ ತೋರಿದರು. ಆಗ ಪಾರ್ಥಸಾರಥಿ ಹೇಳಿದರು. " ಸರ್ ಈ ಯೋಜನೆ ಪ್ರಾರಂಭವಾದ ಮೊದಲ ದಿನದಿಂದ, ಮೊದಲ ಕಲ್ಲು ಹಾಕುವುದರಿಂದ ಇಂದಿನವರೆಗೆ ಒಬ್ಬ ಅದಿವಾಸಿ ಮಹಿಳೆ ಕೆಲಸಮಾಡಿದ್ದಾಳೆ. ಆಕೆಯಿಂದ ಉದ್ಘಾಟನೆ ಮಾಡಿಸುತ್ತಿದ್ದೆ." ತಕ್ಷಣ ನೆಹರೂ ಆಕೆಯನ್ನು ಕರೆಯಿರಿ ಎಂದು ಕರೆಸಿದರು. ನಂತರ ಪ್ರಧಾನಮಂತ್ರಿಗಳು ಆಕೆಯೊಂದಿಗೆ ಉದ್ಘಾಟನೆ ಮಾಡಿದರು. ಹೀಗೆ ಭಾರತದ ಮೊಟ್ಟ ಮೊದಲ ಬೃಹತ್ ಯೋಜನೆಯ ಉದ್ಘಾಟನೆ ಪ್ರಧಾನಮಂತ್ರಿ ಹಾಗೂ ಒಬ್ಬ ಅದಿವಾಸಿ ಮಹಿಳೆಯಿಂದಾದದ್ದು ಸುಂದರ ಇತಿಹಾಸ. ನೆಹರೂರವರಿಗೆ ತುಂಬ ಸಂತೋಷವಾಗಿತ್ತು. ಆಗ ಪಾರ್ಥಸಾರಥಿ

ನೆಹರೂರವರಿಗೆ ತುಂಬ ಪ್ರಿಯವಾದ ಕೆಂಪುಗುಲಾಬಿಯ ಹೂಗಳ ಹಾರವನ್ನು ಹಾಕಿದರು. ತಕ್ಷಣ ನೆಹರೂ "ಛೇ, ಛೇ, ಇದು ನನಗಲ್ಲ, ಆಕೆಗೆ ಸೇರಬೇಕು ಎಂದು ಕತ್ತಿನಲ್ಲಿ ಹಾಕಿದ್ದ ಹಾರವನ್ನು ತೆಗೆದು ಆಕೆಯ ಕೊರಳಿಗೆ ಹಾಕಿಬಿಟ್ಟರು.! ಎಲ್ಲರೂ ಸಂಭ್ರಮಪಟ್ಟರು. ಆದರೆ ಮರುದಿನ ಒಂದು ದುರಂತ ಕಾದಿತ್ತು. ಬೆಳಿಗ್ಗೆ ಆ ಆದಿವಾಸಿ ಹೆಂಗಸು ಪಾರ್ಥಸಾರಥಿಯವರ ಬಳಿ ಬಂದು ತನ್ನ ಸಂಸಾರ ಮೂರಾಬಟ್ಟೆಯಾಗಿ ಹೋಯಿತು ಎಂದು ಅತ್ತಳು. ಅವರ ಪದ್ಧತಿಯಂತೆ ಮತ್ತೊಬ್ಬ ಪುರುಷ ಮದುವೆಯಾದ ಹೆಂಗಸಿಗೆ ಹಾರ ಹಾಕಿದರೆ, ಮೊದಲಿನ ಮದುವೆ ರದ್ದಾಗಿ, ಎರಡನೆಯವನೇ ಗಂಡನಾಗುತ್ತಾನೆ. ಆಕೆಯ ಗಂಡ ಆಕೆಯನ್ನು ತೊರೆದು ಹೋಗಿಬಿಟ್ಟಿದ್ದ. ಪಾರ್ಥಸಾರಥಿ ಹೌಹಾರಿದರು. ಈ ವಿಷಯವನ್ನು ನೆಹರೂರವರಿಗೆ ಹೇಳಿ ಒಪ್ಪಿಸಲಾಗುತ್ತದೆಯೇ? ಅವರೇನೋ ಪಾಪ, ಒಂದು ಉದಾತ್ತಭಾವನೆಯಿಂದ, ಜನಪ್ರೀತಿಯಿಂದ ಹಾಗೆ ಮಾಡಿದ್ದರು. ಕೊನೆಗೆ ಪಾರ್ಥಸಾರಥಿ ಬೋರ್ಡಿನಿಂದ ವಿಶೇಷ ಪರವಾನಿಗಿ ತೆಗೆದುಕೊಂಡು, ಆಕೆ ಬದುಕಿರುವವರೆಗೆ ತೊಂದರೆಯಾಗದಂತೆ, ಪುಟ್ಟ ಮನೆಯೊಂದನ್ನು ಕೊಟ್ಟು, ಸಂಬಳ, ಪಿಂಚಣಿ ಗೊತ್ತು ಮಾಡಿದರು. ಇದೊಂದು ರೀತಿಯ, ತಾನು ಮಾಡದಿದ್ದ ತಪ್ಪಿಗೆ, ಅಪರೋಕ್ಷ ಪ್ರಾಯಶ್ಚಿತ್ತ. ಇದರಲ್ಲಿ ನನಗೊಂದು ಪಾಠ, ಜನರಿಗೆ ಒಳ್ಳೆಯದನ್ನು, ಸಂತೋಷವಾಗುವುದನ್ನು ಮಾಡುವ ಆತುರದಲ್ಲಿ ಎಲ್ಲಿ ತೊಂದರೆ ಮಾಡಿಬಿಡುತ್ತೇವೋ ಎಂಬ ಎಚ್ಚರಿಕೆ ಇರುವುದು ಒಳ್ಳೆಯದು.

**ಲೇಖಕರು: ಡಾ: ಗುರುರಾಜ ಕರಜಗಿ,**

**ಸುಪ್ರಸಿದ್ಧ ಶಿಕ್ಷಣ ತಜ್ಞರು,**

**ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:12.08.2020**